# ಹಿಂದೂಗಳಿಗೆ ಕರೆ

**ಪಾ**ಶ್ಚಾತ್ಯ ಮಾಧ್ಯಮಗಳು ಹಿಂದೂಧರ್ಮವನ್ನು ಅತ್ಯಂತ ಕೀಳಾಗಿ ಪ್ರತಿನಿಧಿಸುವುದರಲ್ಲಿ ತುಂಬ ಉತ್ಸುಕವಾಗಿರುವಂತೆ ಕಂಡುಬರುತ್ತಿದೆ. ಹಿಂದೂಧರ್ಮವನ್ನು ಒಂದು ನಿಂದನೀಯ ಧರ್ಮವಾಗಿ ಜನರ ಮುಂದೆ ತೋರಿಸುವುದೇ ಅವುಗಳ ಉದ್ದೇಶವೆಂದು ತೋರುತ್ತದೆ. "ಹಿಂದೂಧರ್ಮದ ಮೇಲೆ ಎರಚಿರುವಷ್ಟು ಮಣ್ಣು ಹಿಂದೂಮಹಾಸಾಗರದ ತಳದಲ್ಲಿರುವ ಮಣ್ಣಿಗಿಂತ ಅಧಿಕ" ಎಂದು ಕಳೆದ ಶತಮಾನದಲ್ಲಿ ಸ್ವಾಮಿ ವಿವೇಕಾನಂದರು ಉದ್ಗರಿಸಿದರು. ಆ ಮಣ್ಣು ಇನ್ನೂ ಖಾಲಿಯಾಗಿಲ್ಲವೆಂದು ತೋರುತ್ತದೆ ಎಂದು ಅಭಿಪ್ರಾಯ ಪಡುತ್ತಾರೆ ಲಂಡನ್‌ನ ವಿವೇಕಾನಂದ ಕೇಂದ್ರದ ಜಾಯ್ ಅವರು.

ಬಿ.ಬಿ.ಸಿ.ಯು ಕ್ರೈಸ್ತಧರ್ಮದ ಆದರ್ಶವನ್ನು ಬಿತ್ತರಿಸುವುದರಲ್ಲೇ ಹೆಚ್ಚು ಆಸಕ್ತವಾಗಿರುವಂತೆ ಕಂಡುಬರುತ್ತದೆ. ಹಿಂದೂಧರ್ಮಕ್ಕೆ ಅನ್ಯಾಯವಾಗಿ ಆರೋಪಿಸಲಾಗಿರುವ ಎಲ್ಲ ಕುತ್ಸಿತ ವಿಷಯಗಳಿಗೂ ಹೆಚ್ಚು ಪ್ರಚಾರವನ್ನು ನೀಡಿ, ವಿವೇಕಾನಂದರಂತಹ ಮಹಾವ್ಯಕ್ತಿಗಳ ಉದಾತ್ತ ಭಾವನೆಗಳನ್ನು ಮರೆಮಾಚುವ ಪ್ರಯತ್ನ ಅಲ್ಲಿ ನಡೆದಿದೆ—ಎಂದು ಜಾಯ್ ಅಭಿಪ್ರಾಯ ಪಡುತ್ತಾರೆ.

ಭಾರತೀಯ ಮಾಧ್ಯಮಗಳಲ್ಲಿಯೂ ಹಿಂದೂಧರ್ಮವನ್ನು ಸರಿಯಾದ ಬೆಳಕಿನಲ್ಲಿ ಪ್ರತಿಬಿಂಬಿಸಲಾಗುತ್ತಿಲ್ಲ. ಭಾರತದ ಬಹುತೇಕ ದಿನಪತ್ರಿಕೆಗಳು, ನಿಯತಕಾಲಿಕೆಗಳು, ಟಿ.ವಿ.ಚಾನೆಲ್ಲುಗಳು ಹಿಂದೂಧರ್ಮವನ್ನು ಮೂಢನಂಬಿಕೆಗಳು ಮತ್ತು ಪ್ರಗತಿ ವಿರೋಧಿ ಚಿಂತನೆಗಳೊಂದಿಗೆ ಸಮೀಕರಿಸುತ್ತವೆ. ಒಬ್ಬ ಆಧ್ಯಾತ್ಮಿಕ ಮುಂದಾಳುವು ಉತ್ತಮ ಉಪನ್ಯಾಸದ ಮೂಲಕ ಉದಾತ್ತ, ಉಪಯುಕ್ತ ಚಿಂತನೆಗಳನ್ನು ನೀಡಿದರೆ ಅದರ ವರದಿಯೇ ಬರುವುದಿಲ್ಲ. ವಾಮಾಚಾರ ತಾಂತ್ರಿಕನೊಬ್ಬನು ಕುತ್ಸಿತ ಆಚರಣೆಯಲ್ಲಿ ತೊಡಗಿರುವ ವಿಷಯ ದೊಡ್ಡ ಸುದ್ದಿಯಾಗುತ್ತದೆ. ಇಂಥ ವಿಷಯಗಳನ್ನೇ ಆಧಾರವಾಗಿಟ್ಟುಕೊಂಡು, ಹಿಂದೂಧರ್ಮವು ದೇಶದ ಪ್ರಗತಿಗೆ ಹೇಗೆ ವಿರುದ್ಧವಾಗಿದೆ ಎಂಬ ವಿಚಾರವಾಗಿ ದೀರ್ಘ ಚರ್ಚೆ ನಡೆಯುತ್ತದೆ.

ಕೆಲವು ದಿನಗಳ ಹಿಂದೆ ರಾಜಕಾರಿಣಿಯೊಬ್ಬರು ಟಿ.ವಿ. ಮಾಧ್ಯಮದಲ್ಲಿ, "ಹಿಂದಿನ ಸರ್ಕಾರದವರು ವೇದ ಉಪನಿಷತ್ತುಗಳನ್ನು ಶಾಲೆಗಳಲ್ಲಿ ಬೋಧಿಸಬೇಕು ಎಂಬ ಯೋಜನೆಯ ಮೂಲಕ ದೇಶವನ್ನು ಅನಾಗರಿಕ ಬರ್ಬರ ದಿನಗಳಿಗೆ ಕೊಂಡೊಯ್ಯುವುದರಲ್ಲಿದ್ದರು" ಎಂದು ಕಟುವಾಗಿ ನುಡಿದಿದ್ದಾರೆ. ಇದನ್ನು ಕೇಳಿ ನಾವು ತುಂಬ ಚಕಿತರಾದವೆಂದು ಜಾಯ್ ಹೇಳುತ್ತಾರೆ. ವಿವೇಕಾನಂದರ ಉದಾತ್ತ ಚಿಂತನೆಗಳಿಗೆಲ್ಲ ಆಧಾರಭೂತವಾಗಿರುವ ಉಪನಿಷತ್ತಿನ ಸಂದೇಶಗಳು ಅನಾಗರಿಕವೆ? ಭಾರತೀಯ ಮಾಧ್ಯಮಗಳ ಧೋರಣೆ ಇದಾಗಿದೆ: "ಭಾರತದಲ್ಲಿನ ಎಲ್ಲ ಅನಿಷ್ಟಗಳಿಗೂ ಹಿಂದೂಧರ್ಮವೇ ಕಾರಣ, ಮತ್ತು ವಿಜ್ಞಾನವು ಒಂದು ದಿನ ಹಿಂದೂಧರ್ಮದ ಎಲ್ಲ ಸಿದ್ಧಾಂತಗಳನ್ನೂ ತಪ್ಪು ಎಂದು ತೋರಿಸುತ್ತದೆ. ಆಗ ಜನಸಾಮಾನ್ಯರೆಲ್ಲ ಅಜ್ಞಾನದಿಂದ ಮುಕ್ತರಾಗಿ, ದೇಶಾಭಿವೃದ್ಧಿ ಆಗುತ್ತದೆ."

ಲಂಡನ್‌ನಲ್ಲಿ ಫ್ರಾಂಕೊಯಿಸ್ ಗೌಟಿಯರ್ (Francois Gautier) ಅವರು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಗಮನಿಸಿ:

"ಹಿಂದೂಗಳೇ ಹಿಂದೂಧರ್ಮದ ಪರಮಶತ್ರುಗಳು. ಅವರು ತಮ್ಮ ಧರ್ಮದ ಬಗ್ಗೆ ತಲೆ ಕೆಡಿಸಿಕೊಳ್ಳುವುದೇ ಇಲ್ಲ. ನಿಮಗೇ ನಿಮ್ಮ ಧರ್ಮದ ಬಗ್ಗೆ ಕಳಕಳಿ ಇಲ್ಲದಿರುವಾಗ ಬಿ.ಬಿ.ಸಿ. ನಿಮ್ಮ ಧರ್ಮವನ್ನು ಉದ್ಧಾರ ಮಾಡಬೇಕೆಂದು ನಿರೀಕ್ಷಿಸುತ್ತಿರಾ? ಭಾರತದ ಮೂಲೆ ಮೂಲೆಯಿಂದಲೂ ಹಿಂದೂಧರ್ಮವು ಅಳಿಸಿಹೋಗುತ್ತಿದೆ. ಎಲ್ಲೆಲ್ಲಿಯೂ ಭಕ್ತಿಗೀತೆಗಳನ್ನು ಕೇಳುವು ಕಾಲವೊಂದಿತ್ತು. ಈಗ ಎಲ್ಲೆಲ್ಲಿಯೂ ಕಿವಿಗಡಚಿಕ್ಕುವ ಸಿನೆಮಾ ಹಾಡುಗಳೇ ಕೇಳಿಬರುತ್ತಿವೆ (ಭಕ್ತಿಗೀತೆಗಳೂ ಸಿನೆಮಾ ಹಾಡುಗಳಂತೆಯೇ ಇರುತ್ತವೆ). ಹಿಂದೆ ಬೇರೆ ಧರ್ಮಗಳು ಹಿಂದೂಧರ್ಮವನ್ನು ಅಳಿಸಿಹಾಕುವ ಭಯವಿತ್ತು. ಆದರೆ ಈಗ ಇರುವ ದೊಡ್ಡ ಅಪಾಯವೆಂದರೆ ಶಕ್ತಿಯುತ ಮಾಧ್ಯಮಗಳ ಮೂಲಕ ಬಿತ್ತರಿಸಲಾಗುತ್ತಿರುವ 'ಅಧಾರ್ಮಿಕ ಜೀವನವಿಧಾನ'. ಭಾರತ ಈ ರೀತಿ ನಾಶವಾದರೆ ಪ್ರಪಂಚದಲ್ಲಿ ಆಧ್ಯಾತ್ಮಿಕತೆಯೇ ನಾಶವಾಗುತ್ತದೆ."

ಒಬ್ಬ ಪಾಶ್ಚಾತ್ಯ ವ್ಯಕ್ತಿಯ ಈ ಮೇಲಿನ ಅಭಿಪ್ರಾಯಗಳು ಹಿಂದೂಗಳನ್ನು ಎಚ್ಚರಗೊಳಿಸಬೇಕು. ಭಾರತದ ವಿಚಾರವಾದಿಗಳೆನಿಸಿಕೊಳ್ಳುವರು ಹಿಂದೂಧರ್ಮದೊಡನೆ ಸೇರಿಕೊಂಡಿರುವ ಕೆಟ್ಟ ಪದ್ಧತಿಗಳನ್ನು ಮಾತ್ರ ಎತ್ತಿ ತೋರಿಸುತ್ತ ಇತರ ಧರ್ಮಗಳ ಬಗ್ಗೆ ಚಕಾರವೆತ್ತುವುದಿಲ್ಲ. "ಪುರಾತನ ಪ್ರಪಂಚದ ಯಾವುದೇ ಭಾಗದಲ್ಲಿಯೂ ಮಾನವ-ಮಾನವ ಸಂಬಂಧ ಹಾಗೂ ಪ್ರಜೆ ಮತ್ತು ರಾಜ್ಯಗಳ ಸಂಬಂಧ ಭಾರತದಲ್ಲಿರುವಷ್ಟು ನ್ಯಾಯಪೂರ್ಣವೂ ಮಾನವೀಯವೂ ಆಗಿರಲಿಲ್ಲ. ಪುರಾತನ ಭಾರತೀಯ ನಾಗರಿಕತೆಯಲ್ಲಿ ಅತ್ಯಂತವಾಗಿ ನಮ್ಮ ಗಮನಕ್ಕೆ ಬರುವುದೆಂದರೆ ಅದರ ಮಾನವೀಯತೆ," ಎಂದು ಅಭಿಪ್ರಾಯಪಡುತ್ತಾರೆ ಎ.ಎಲ್. ಬಷಾಮ್. ಇಂತಹ ಮಹೋನ್ನತ ಸಂಸ್ಕೃತಿಗೆ ತಳಹದಿಯಾದ ಧರ್ಮವನ್ನೇ ನಾವು ಒಂದು ಕಳೆ ಎಂಬಂತೆ ಕಿತ್ತೆಸೆಯುತ್ತಿದ್ದೇವೆ. ಸ್ವಾಮಿ ವಿವೇಕಾನಂದರ ಕರೆಯನ್ನು ಹಿಂದೂಗಳು ಆಲಿಸುವುದೆಂದು?

(ಆಧಾರ: ಲಂಡನ್ನಿನ ವಿವೇಕಾನಂದ ಕೇಂದ್ರದವರು ಕಳಿಸಿದ ಇ-ಮೇಲ್ ವರದಿ)

> ಒಂದು ದಿನ ಭಾರತದ ಜ್ಞಾನವು ಮತ್ತೆ ಯುರೋಪಿಗೆ ಹರಿದುಬಂದು ನಮ್ಮ ಜ್ಞಾನ ಮತ್ತು ಚಿಂತನೆಯನ್ನು ಸಂಪೂರ್ಣ ಬದಲಾಯಿಸುತ್ತದೆ.
>
> – *ಷೋಪನೀರ್* ***(Schopenhaur)***